ಸಾಕ್ಷಿಯನ್ನು ದಿನಾಂಕಃ 28.02.2023 ರಂದು ಕರೆದು ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆ ಃ ಶ್ರೀ.ಎ ಎ ಎಮ ವಕೀಲರು ವಾದಿ ಪರ ವಕೀಲರಿಂದ-**

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿವೆ.

1) ನನ್ನ ತಾಯಿಯವರು ನನ್ನ ಪರವಾಗಿ ನೀಡಿದ ಒಟ್ಟು ಮುಕ್ತಿಯಾರ ಪತ್ರವನ್ನು ಹಾಜರಪಡಿಸಿದ್ದು ಅದನ್ನು ನಿಪಿ.1 ಎಂದು ಗುರುತಿಸಲಾಯಿತು.

2) ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಗರ ಭೂಮಾಪಕರು ನೀಡಿದ ಒಟ್ಟು ಮೂರು ದೃಢಿಕೃತ ರೂಲ್ಡ ಕಾರ್ಡ ಉತಾರೆಯನ್ನು ಹಾಜರಪಡಿಸಿದ್ದು ಅದನ್ನು ನಿಪಿ.2 ರಿಂದ 4 ಎಂದು ಗುರುತಿಸಲಾಯಿತು.

3) ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 29.09.2010 ರ ದೃಢಿಕೃತ ನೊಂದಾಯಿತ ಖರೀದಿ ಪತ್ರವನ್ನು ಹಾಜರುಪಡಿಸಿದ್ದು ಸಾಕ್ಷಿಯು ಮೂಲ ಪ್ರತಿಯನ್ನು ರಾಮಲಿಂಗೇಶ್ವರ ಬ್ಯಾಂಕನಲ್ಲಿ ಸಾಲಕ್ಕಾಗಿ ದಾಖಲೆಯನ್ನು ನೀಡಿದ್ದು, ಆದ್ದರಿಂದ ದೃಢಿಕೃತ ಪ್ರತಿಯನ್ನು ನಿಶಾನೆಗೊಳಿಸಬೇಕಾಗಿ ಕೇಳಿಕೊಂಡಿದ್ದು, ಸದರಿ ದಾಖಲೆಯನ್ನು ನಿಪಿ.5 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ತನ್ನ ಪರ ಸಾಕ್ಷಿದಾರರ ವಿಚಾರಣೆಗೆ ಮಾಡಲು ಕಾಲಾವಕಾಶ ಕೋರಿದ್ದು, ಮಂಜೂರು ಮಾಡಲಾಯಿತು.

ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಪ್ರತಿವಾದ ಪತ್ರ ಸಲ್ಲಿಸದೆ ಇರುವುದರಿಂದ ಅವರ ಪ್ರಾರ್ಥನೆಯನ್ನು ತೀರಸ್ಕರಿಸಿ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿ